**ವಾತಾವರಣ**
ಕನಿಷ್ಠ 20, ಗರಿಷ್ಠ 28 ಡಿಗ್ರಿ ಉಷ್ಣಾಂಶವಿದ್ದು, ಆಗಾಗ ಮಳೆಯಾಗಲಿದೆ.

## ಬೆಂಗಳೂರು ವಿವಿ ಪ್ರವೇಶ ಪ್ರಕ್ರಿಯೆ ಪ್ರಾರಂಭ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯವನ್ನು ತ್ರಿಭಜಿಸಿ, ಬೆಂಗಳೂರು ಉತ್ತರ ಮತ್ತು ಬೆಂಗಳೂರು ಕೇಂದ್ರ ಎಂಬ ವಿವಿ ಸ್ಥಾಪಿಸಿದರೂ ಬೆಂಗಳೂರು ವಿವಿ ವ್ಯಾಪ್ತಿಗೊಳಪಡುವ ಬೆಂಗಳೂರು ನಗರ, ಬೆಂಗಳೂರು ಗ್ರಾ., ರಾಮನಗರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಕಾಲೇಜಿನಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳೂ ಜ್ಞಾನಭಾರತಿಯಲ್ಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು ಎಂದು ವಿವಿ ತಿಳಿಸಿದೆ.

## ಹಣೆ ಬರಹ

ಒಳ್ಳೆಯದೇ ಬರೆದಿರಲಿ

ಉದಯ 5.56 | ಅಸ್ತ 6.44

**ಗುರುವಾರ** 12.07.2018

ಶ್ರೀವಿಲಂಬಿ, ಉತ್ತರಾಯಣ, ಗ್ರೀಷ್ಮಋತು, ನಿಜ ಜೇಷ್ಠ ಮಾಸ, ಕೃಷ್ಣಪಕ್ಷ, ಚತುರ್ದಶಿ, ಗುರುವಾರ, ನಿತ್ಯನಕ್ಷತ್ರ-ಆರ್ದ್ರಾ, ಯೋಗ-ಧ್ರುವ, ಕರಣ-ಶಕುನ.

| ರಾಹುಕಾಲ | ಗುಳಿಕಕಾಲ | ಯಮಗಂಡಕಾಲ |
|---|---|---|
| 1.30-3.00 | 9.00-10.30 | 6.00-7.30 |

ವಿ.ಡಿ.ಭಟ್ ಕರಸುಳ್ಳಿ (ಶಿರಸಿ) ದೂ: 9449360806

**ಮೇಷ**: ವಿದೇಶಿ ವ್ಯವಹಾರದ ಸಂದರ್ಭ. ಇದರಿಂದ ಲಾಭ. ಮನಸ್ಸಿನ ಆತಂಕ ವನ್ನು ಪ್ರಯತ್ನ ಪೂರ್ವಕವಾಗಿ ನಿವಾರಿಸಿಕೊಳ್ಳಿ.

**ವೃಷಭ**: ಮನಸ್ಸಿಗೆ ಆತಂಕ ಆವರಿಸಿಕೊಳ್ಳುವ ದಿನ. ಇದಕ್ಕೆ ಕುಟುಂಬದ ಬೆಂಬಲವನ್ನು ಬಯಸಿದಲ್ಲಿ ಶುಭ. ವ್ಯವಹಾರದಲ್ಲಿ ಜವಾಬ್ದಾರಿ ಬೇಡ.

**ಮಿಥುನ**: ಸಹವರ್ತಿಗಳ ಜತೆಗೆ ಮೌನ ಬೇಡ. ನೇರ-ದಿಟ್ಟ ನುಡಿಯಿಂದ ಕಾರ್ಯ ಸುಗಮ. ಜಲದಿಂದ ಎಚ್ಚರ.

**ಕಟಕ**: ಕುಟುಂಬದಲ್ಲಿ ನಿಮ್ಮ ಮಾತು ಕೇಳಲೇಬೇಕೆಂಬ ಹಠ ಈ ದಿನ ಬಿಡಿ. ಹಿರಿಯರ ಜತೆ ಪೂಜ್ಯತೆಯನ್ನು ಕಾಪಾಡಿಕೊಳ್ಳಿ.

**ಸಿಂಹ**: ಸಿಗಬೇಕಾದ ಕೆಲಸ ಪ್ರಾರಂಭ. ಅನಾಸಕ್ತಿಯ ಪ್ರವೃತ್ತಿಯಿಂದ ಮೇಲೆದ್ದು ಬರಬೇಕಾದದ್ದು ನಿಮ್ಮ ಹೊಣೆ.

**ಕನ್ಯಾ**: ಶುಭ ಕರೆಯೋಲೆಯವರ ಆಗಮನ. ಕೆಲಸದಲ್ಲಿ ಆಗಬೇಕಾದ ಕಾರ್ಯಕ್ಕೆ ಹಿನ್ನಡೆ. ಧ್ಯಾನಾಸಕ್ತಿಯು ಬೇಕು.

**ತುಲಾ**: ಮೌನ ಈ ದಿನ ಶುಭವಲ್ಲ. ಕಾರ್ಯಾಲಯದಲ್ಲಿ ಮೂಕರಂತೆ ವರ್ತಿಸುವುದು ಬೇಡ. ಮೌಲ್ಯಯುತ ಕೆಲಸವು ಘಟಿಸಲಿದೆ.

**ವೃಶ್ಚಿಕ**: ನೆರೆಯವರಿಂದ ಎಚ್ಚರ. ಚಾಡಿ ಮಾತಿಗೆ ಕಿವಿಗೊಡುವ ಅಗತ್ಯವಿಲ್ಲ. ಚಾರಿತ್ರ್ಯದ ಬಗ್ಗೆ ಎಚ್ಚರ.

**ಧನು**: ಧನ್ಯತಾ ಭಾವ ಕ್ಷೀಣ. ಧಾರ್ಮಿಕತೆಯಲ್ಲಿ ಅಪನಂಬಿಕೆಯನ್ನು ಬಿಡುವುದು ಒಳಿತು. ಅತೀಯಾದ ಚಿಕಿತ್ಸಕ ಗುಣ ಒಳ್ಳೆಯದಲ್ಲ.

**ಮಕರ**: ಸಹೋದರ ಸಂಬಂಧಿಗಳ ಜತೆ ವ್ಯವಹಾರ ತರವಲ್ಲ. ಸ್ವಂತಿಕೆಗೆ ಸ್ವಲ್ಪ ಹಿನ್ನಡೆ. ಸಮಾಧಾನಕ್ಕೆ ಪ್ರಧಾನ್ಯತೆ ನೀಡಿ.

**ಕುಂಭ**: ಆಹಾರದಲ್ಲಿ ಎಚ್ಚರ. ಸುಪ್ತ ಆಸೆಯನ್ನು ತೀರಿಸಿಕೊಳ್ಳುವ ಯೋಗ. ವ್ಯವಹಾರ ದಲ್ಲಿ ಕೌಶಲಪೂರ್ಣ ನಡೆ ಅಗತ್ಯ.

**ಮೀನ**: ವಸ್ತು-ವಾಹನಗಳ ಖರೀದಿಯ ಸಂದರ್ಭ ವನ್ನು ನಯವಾಗಿ ನಿರಾಕರಿಸುವುದು ಲೇಸು. ಸ್ಥಿರ ಪ್ರಜ್ಞತೆಯನ್ನು ಕಾಯ್ದು ಕೊಳ್ಳಬೇಕಾದದ್ದು ಈ ದಿನದ ಅಗತ್ಯ.

ಮೂವರು ಪೊಲೀಸ್ ಸಿಬ್ಬಂದಿ ಸೇರಿ ಐವರ ಬಂಧನ | 18 ಕೋಟಿ ರುಪಾಯಿಗೂ ಹೆಚ್ಚು ವಂಚನೆ | ಪ್ರಕರಣದ ಹಿಂದೆ ಹಿರಿಯ ಅಧಿಕಾರಿ ಕೈವಾಡ !

# ಪೊಲೀಸರಿಂದಲೇ ಉದ್ಯೋಗದ ಆಮಿಷ; ವಂಚನೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಉದ್ಯೋಗಾಕಾಂಕ್ಷಿಗಳಿಗೆ ಡಿವೈಎಸ್‌ಪಿ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಕೆಪಿಎಸ್‌ಸಿ, ಎಫ್‌ಡಿಸಿ ಮತ್ತು ಎಸ್‌ಡಿಸಿ ಸೇರಿದಂತೆ ಹಲವಾರು ಸರಕಾರಿ ಹುದ್ದೆ ಕೊಡಿಸುವ ಆಮಿಷವೊಡ್ಡಿ ನೂರಾರು ಮಂದಿಗೆ ಕೋಟ್ಯಾಂತರ ರುಪಾಯಿ ವಂಚನೆ ಮಾಡಿರುವ ಆರೋಪದ ಮೇಲೆ ಮೂವರು ಪೊಲೀಸ್ ಸಿಬ್ಬಂದಿ ಸೇರಿ ಐವರನ್ನು ಸಿಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ.

ಬೆಂಗಳೂರಿನ ಕೇಂದ್ರ ವಿಭಾಗದ ಸಿಎಆರ್ ಪೇದೆಯಾಗಿ ಕೆಲಸ ಮಾಡುತ್ತಿರುವ ಲಕ್ಷ್ಮೀಕಾಂತ್, ಸಿಎಆರ್ ಗನ್‌ಮ್ಯಾನ್ ಲೋಕೇಶ್, ನೇಮಕ ವಿಭಾಗದ ಸಿಬ್ಬಂದಿ ರಾಜೇಶ್, ನಾಗರಾಜ್, ಶಬಾನಾ ಬೇಗಂ ಪ್ರಕರಣದ ಪ್ರಮುಖ ಆರೋಪಿಗಳು. ಅಲ್ಲದೆ, ಹಗರಣದ ಹಿಂದೆ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯೂ ಶಾಮೀಲಾಗಿರುವ ಶಂಕೆ ವ್ಯಕ್ತವಾಗಿದೆ.

**ಪ್ರಕರಣದ ವಿವರ:** ಡಿವೈಎಸ್‌ಪಿ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಕೆಪಿಎಸ್‌ಸಿ, ಎಫ್‌ಡಿಸಿ ಮತ್ತು ಎಸ್‌ಡಿಸಿ ಸೇರಿದಂತೆ ಹಲವಾರು ಸರಕಾರಿ ಹುದ್ದೆ ಕೊಡಿಸುವುದಾಗಿ ಉದ್ಯೋಗಾಕಾಂಕ್ಷಿಗಳನ್ನು ನಂಬಿಸಿ ಅವರಿಂದ ಲಕ್ಷ್ಮೀಕಾಂತ್ ಹಾಗೂ ಲೋಕೇಶ್ ಕೋಟ್ಯಾಂತರ ರುಪಾಯಿ ಹಣ ಸಂಗ್ರಹ ಮಾಡುತ್ತಿದ್ದರು. ಬಳಿಕ ಲಕ್ಷ್ಮೀಕಾಂತ್ ಹಾಗೂ ಲೋಕೇಶ್ ಹಣವನ್ನು ನಮ್ಮ ಬಾಸ್‌ಗೆ ಕೊಟ್ಟಿದ್ದೇವೆ, ನಿಮ್ಮ ಕೆಲಸ ಆಗುತ್ತೆ ಎಂದು ಹಣ ಕೊಟ್ಟವರನ್ನು ನಂಬಿಸಿ ವಂಚಿಸುತ್ತಿದ್ದರು.



ಆರೋಪಿಗಳು ಪೊಲೀಸ್ ಇಲಾಖೆಯ ಸಿಬ್ಬಂದಿ ಆಗಿದ್ದರಿಂದ ವಂಚನೆಗೆ ಒಳಗಾದವರು ಇವರ ವಿರುದ್ಧ ಧ್ವನಿ ಎತ್ತದೆ ಸುಮ್ಮನಾಗುತ್ತಿದ್ದರು. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿಗಳು ಕೋಟಿ ಕೋಟಿ ಹಣ ಪಡೆದು ವಂಚಿಸಿ ಆ ಹಣದಿಂದ ಆಸ್ತಿ ಮಾಡಿ ಇಟ್ಟಿದ್ದಾರೆ. ಇನ್ನು ಇವರಿಂದ ಹಣ ಪಡೆಯುತ್ತಿದ್ದ ಆ ಅಧಿಕಾರಿ ಯಾರು ಎಂಬ ಬಗ್ಗೆ ತನಿಖೆಯಿಂದ ತಿಳಿಯಬೇಕಿದೆ. ಆ ಹಿರಿಯ ಅಧಿಕಾರಿಯ ಬಗ್ಗೆ ಈವರೆಗೂ ಲಕ್ಷ್ಮೀಕಾಂತ್ ಯಾರ ಬಳಿಯೂ ಬಾಯ್ಬಿಟ್ಟಿಲ್ಲ ಎಂದು ತಿಳಿದು ಬಂದಿದೆ. ಇನ್ನು ಇವರಿಬ್ಬರ ಈ ಕೃತ್ಯಕ್ಕೆ ಸಹಕಾರ ನೀಡಿದ ಆರೋಪದ ಮೇಲೆ ಕೆ.ಪಿ.ರಾಜೇಶ್, ಎಚ್.ನಾಗರಾಜ್ ಮತ್ತು ಶಬಾನ ಬೇಗಂ ಅವರನ್ನು ಬಂಧಿಸಿ ಸಿಸಿಬಿ ಅಧಿಕಾರಿಗಳು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

### ಮೂರು ವರ್ಷದಲ್ಲಿ ₹ 18 ಕೋಟಿ ವಂಚನೆ

ಬಂಧಿತ ಪೇದೆ ಲಕ್ಷ್ಮೀಕಾಂತ್‌ನಿಂದ ಆಸ್ತಿ ಜಪ್ತಿ ಮಾಡಿ ಸಿಸಿಬಿ ಪೊಲೀಸರೇ ಶಾಕ್ ಆಗಿದ್ದಾರೆ. 2014ರಿಂದ 2017ರವರೆಗೆ ಲಕ್ಷ್ಮೀಕಾಂತ್ ಸಂಗ್ರಹಿಸಿರುವ ಹಣದ ಮೊತ್ತ 18 ಕೋಟಿಗೂ ಹೆಚ್ಚು. ಈ ಎಲ್ಲ ಹಣ ವಂಚನೆಯಿಂದ ಸಂಪಾದಿಸಿದ್ದು ಎಂದು ಆತನೇ ಬಾಯ್ಬಿಟ್ಟಿದ್ದಾನೆ ಎನ್ನಲಾಗಿದೆ. ಈ ನಡುವೆ ತನ್ನ ಪತ್ನಿ ಮೂಲಕ ಆಸ್ತಿ ಮಾರಾಟ ಮಾಡಿಸಲು ಲಕ್ಷ್ಮೀಕಾಂತ್ ಯತ್ನಿಸಿದ್ದ. ಈ ವಿಷಯ ತಿಳಿದ ಸಿಸಿಬಿ ಪೊಲೀಸರು ಪ್ರಕರಣ ಇತ್ಯರ್ಥವಾಗುವತನಕ ಮಾರಾಟ ಮಾಡದಂತೆ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿದು ಬಂದಿದೆ.

### ಬಂಧನದ ವೇಳೆ ₹ 10 ಕೋಟಿ ಆಸ್ತಿ ಪತ್ತೆ

ಬಂಧನದ ವೇಳೆ ಸಿಸಿಬಿ ಅಧಿಕಾರಿಗಳು 10 ಕೋಟಿ ರುಪಾಯಿ ಮೌಲ್ಯದ ಆಸ್ತಿಪಾಸ್ತಿ ಜಪ್ತಿ ಮಾಡಿದ್ದಾರೆ. ಅಕ್ರಮ ಆಸ್ತಿ ಜಪ್ತಿ ಮಾಡಿದ ಸಿಸಿಬಿ ಅಧಿಕಾರಿಗಳು, ಲಕ್ಷ್ಮೀಕಾಂತ್ ಹಾಗೂ ಆತನ ಕುಟುಂಬಸ್ಥರ ಹೆಸರಲ್ಲಿನಲ್ಲಿದ್ದ ಬ್ಯಾಂಕ್ ಖಾತೆಯನ್ನೂ ವಶಕ್ಕೆ ಪಡೆದಿದ್ದಾರೆ. ಅಲ್ಲದೆ, ತನಿಖಾಧಿಕಾರಿಗಳು ಇತರ ಆರೋಪಿಗಳ ಆಸ್ತಿಯ ವಿವರ ಕಲೆ ಹಾಕುತ್ತಿದ್ದಾರೆ.

# ಕನ್ನಡದಿಂದ ಆತ್ಮವಿಶ್ವಾಸ ಹೆಚ್ಚಳ

**ಬೆಂಗಳೂರು:** ಒಂದರಿಂದ ಹತ್ತನೇ ತರಗತಿವರೆಗೆ ಮಕ್ಕಳು ಕನ್ನಡದಲ್ಲಿ ಕಲಿತರೆ ಸೃಜನಶೀಲತೆ ಬೆಳೆಯಲಿದ್ದು, ಎಂತಹ ಸಾಧನೆಯನ್ನಾದರೂ ಮಾಡಬಹುದು ಎಂದು ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ತಿಳಿಸಿದರು.

ವಿ. ಸೋಮಣ್ಣ ಪ್ರತಿಷ್ಠಾನ ವತಿಯಿಂದ ಭಾರತೀಯ ವಿದ್ಯಾಭವನದಲ್ಲಿ ನಡೆದ ಜೆ.ಎಚ್.ಪಟೇಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತರತ್ನ ಸಿ.ಎನ್.ಆರ್ ರಾವ್ ಅವರು ಕನ್ನಡ ಭಾಷೆಯಲ್ಲಿಯೇ ಕಲಿತು ವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿರುವುದು ಕನ್ನಡದ ಪ್ರಾಮುಖ್ಯತೆಗೆ ಹಿಡಿದ ಕೈಗನ್ನಡಿ. ಆಂಗ್ಲ ಮಾಧ್ಯಮದಲ್ಲಿ ಕಲಿತವರು ಅಮೆರಿಕದಲ್ಲಿ ಕ್ಲರ್ಕ್ ಆದರೆ, ಕನ್ನಡದಲ್ಲಿ ಕಲಿತವರು ವಿದೇಶಗಳಲ್ಲಿನ ಪ್ರತಿಷ್ಠಿತ ವಿವಿಗಳಲ್ಲಿ ಉಪನ್ಯಾಸಕರಾಗುತ್ತಾರೆ ಎಂದು ಹೇಳಿದರು.

ವಿಶ್ವಮಾನ್ಯತೆ ಪಡೆದ ಕನ್ನಡ ಭಾಷೆಯಲ್ಲಿಯೇ ಮಕ್ಕಳಿಗೆ ಶಿಕ್ಷಣ ಕೊಡಿಸಿ, ನಮ್ಮ ಭಾಷೆಯಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಬದಲಾಗಿ ಪೋಷಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸುವ ಮೂಲಕ ಮಾತೃ ಭಾಷೆ ಕಡೆಗಣಿಸುತ್ತಿದ್ದಾರೆ ಎಂದು ವಿಷಾದಿಸಿದರು.

ಪ್ರತಿಷ್ಠಾನ ಸಮಾಜಮುಖಿ ಕಾರ್ಯ, ಶಾಸಕ ವಿ. ಸೋಮಣ್ಣ ಮತ್ತು ರಾಜ್ಯ ಚಿತ್ರಕಲಾ ಪರಿಷತ್ ಅಧ್ಯಕ್ಷ ಡಾ. ಬಿ.ಎಲ್ ಶಂಕರ್ ಅವರ ಕಾರ್ಯ ಶ್ಲಾಘಿಸಿ ಜೆ.ಎಚ್.ಪಟೇಲ್ ಪ್ರಶಸ್ತಿ ತಮಗೆ ಸಂದಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.



ವಿ. ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರಿಗೆ ಜೆ.ಎಚ್.ಪಟೇಲ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಮನು ಬಳಿಗಾರ್, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ. ಅರುಣ್ ಸೋಮಣ್ಣ, ಬಿ.ಎನ್.ನವೀನ್, ಬಿಬಿಎಂಪಿ ಸದಸ್ಯ ಎಸ್.ರಾಜು, ಇತರರು ಇದ್ದರು.

# ಪತಿಯಿಂದಲೇ ಮಹಿಳಾ ಕಾರ್ಪೊರೇಟರ್ ಮೇಲೆ ಹಲ್ಲೆ

**ಬೆಂಗಳೂರು:** ಥಣಿಸಂದ್ರ ವಾರ್ಡ್ ಕಾರ್ಪೊರೇಟರ್ ಮಮತಾ ಅವರ ಮೇಲೆ ಪತಿಯೇ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಡೆದಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ತೀವ್ರವಾಗಿ ಗಾಯಗೊಂಡ ಮಮತಾ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪತಿ ವೆಂಕಟೇಶ್ ಅಲಿಯಾಸ್ ಪಳನಿ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ.

ಜುಲೈ 8ರಂದು ಮಗ ವೈಶಾಖ್ ಆಟವಾಡಲು ಹೋಗಿದ್ದ ಎಂಬ ಕಾರಣಕ್ಕೆ ಆತನನ್ನು ವೆಂಕಟೇಶ್ ಹೊಡೆಯುತ್ತಿದ್ದರು. ಈ ವೇಳೆ ಮಧ್ಯೆ ಪ್ರವೇಶಿಸಿದ ಪತ್ನಿ ಮಮತಾ ಮಗನನ್ನು ಹೊಡೆಯದಂತೆ ತಡೆದಿದ್ದರು. ಈ ವೇಳೆ ಗಂಡ ಮತ್ತು ಹೆಂಡತಿ ನಡುವೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ. ಈ ವೇಳೆ ಸಿಟ್ಟಿಗೆದ್ದ ವೆಂಕಟೇಶ್, ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದ್ದಲ್ಲದೆ, ಆಕೆಯ ಹೊಟ್ಟೆಗೆ ಒದ್ದಿದ್ದಾನೆ. ನಂತರ ಕೆಳಗೆ ಬಿದ್ದಿದ್ದ ಮಮತಾ ಅವರನ್ನು ಮನಬಂದಂತೆ ಥಳಿಸಿದ್ದಾನೆ. ಈ ಸಂಬಂಧ ಪತಿ ವಿರುದ್ಧ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಮಮತಾ ದೂರು ದಾಖಲಿಸಿದ್ದಾರೆ. ಎಫ್‌ಐಆರ್ ದಾಖಲಾಗುತ್ತಿದ್ದಂತೆ ಆರೋಪಿ ವೆಂಕಟೇಶ್ ಪರಾರಿಯಾಗಿದ್ದಾನೆ. ಆತನ ಶೋಧಕ್ಕೆ ಪೊಲೀಸರು ಮುಂದಾಗಿದ್ದಾರೆ.

ಕಳೆದ ಮೂರು ವರ್ಷಗಳಿಂದಲೂ ಒಂದಲ್ಲ ಒಂದು ಕಾರಣಕ್ಕೆ ಮಮತಾ ಮತ್ತು ವೆಂಕಟೇಶ್ ಮಧ್ಯೆ ಗಲಾಟೆ ನಡೆಯುತ್ತಿದೆ. ಈ ಹಿಂದೆಯೂ ಹಲವು ಬಾರಿ ತನ್ನ ಮೇಲೆ ಹಲ್ಲೆ ನಡೆಸಿದ್ದ ಪತಿ ವೆಂಕಟೇಶ್ ವಿರುದ್ಧ 2017ರಲ್ಲಿ ಮಮತಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ವೆಂಕಟೇಶ್ ಮಾಜಿ ರೌಡಿಶೀಟರ್ ಆಗಿದ್ದು, ಈ ಹಿಂದೆ ಶ್ರೀರಾಮಪುರ, ಶೇಷಾದ್ರಿಪುರ ಠಾಣೆಯಲ್ಲಿ ಈತನ ಮೇಲೆ ಎರಡು ಕೊಲೆ, 4ರಿಂದ 5 ಡಕಾಯಿತಿ, ರಾಬರಿ ಪ್ರಕರಣಗಳು ದಾಖಲಾಗಿವೆ. 2016ರಲ್ಲಿ ಗಣೇಶ ಹಬ್ಬದ ಸಂದರ್ಭದಲ್ಲಿ ಶ್ರೀರಾಮಪುರದಲ್ಲಿ ನಂಗಾನಾಚ್ ಮಾಡಿಸಿದ ಎಂಬ ಆರೋಪ ಈತನ ಮೇಲಿದೆ.



ವೆಂಕಟೇಶ್, ಮಮತಾ ದಂಪತಿ.

# ಕ್ಷಮೆ ಕೋರಿದ ಮಜುಂದಾರ್ ಶಾ

**ಬೆಂಗಳೂರು:** ಕನ್ನಡಪರ ಹೋರಾಟಗಾರರ ಬಗ್ಗೆ ಅವಹೇಳನ ಮಾಡಿ ಟ್ವೀಟ್ ಮಾಡಿದ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಕ್ಷಮೆಯಾಚಿಸಿದ್ದಾರೆ.

ಈ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಎಸ್.ಜಿ.ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಶಾ, ಕೆಳ ಹಂತದಿಂದಲೇ ಬೆಳೆದಿರುವ ನನಗೆ ಸಾಮಾನ್ಯ ಜೀವನದ ಕಷ್ಟ-ಸುಖಗಳ ಅರಿವಿದ್ದು, ನನ್ನ ಸಾಮಾಜಿಕ ಕಳಕಳಿಯ ಹಿಂದಿನ ಉದ್ದೇಶವನ್ನು ಅನುಮಾನದಿಂದ ನೋಡುವುದು ಬೇಡ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕಿರಣ್ ಮಜುಂದಾರ್ ಶಾ ಅವರು,'ಕೆಲ ಸಣ್ಣ ಪುಟ್ಟ ಹೋರಾಟಗಾರರು ತೊಂದರೆ ಕೊಡಲೆಂದೆ ಇದ್ದಾರೆ, ಅವರಿಗೆ ಮಾಧ್ಯಮ ಪ್ರಚಾರ ಕೊಡುತ್ತಿದೆ. ಅಂತಹ ಹೋರಾಟಗಾರರು ಜನಸಾಮಾನ್ಯರಿಗೆ ಶಿಕ್ಷಣ ಹಾಗೂ ಉದ್ಯೋಗ ಕೊಡಿಸಲು ಹೋರಾಟ ಮಾಡುತ್ತಿಲ್ಲ' ಎಂದು ಟೀಕಿಸಿ ಟ್ವೀಟ್ ಮಾಡಿದ್ದರು. ಇದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್.ಸಿ ಸಿದ್ದರಾಮಯ್ಯ ಅವರು ಪತ್ರ ಬರೆದು, ತಾವು ಕನ್ನಡಪರ ಹೋರಾಟಗಾರರನ್ನು ಪ್ರಚಾರ ಗಿಟ್ಟಿಸಿಕೊಳ್ಳುವ ವ್ಯಕ್ತಿಗಳು ಎಂದಿರುವುದು ಖಂಡನೀಯ. ಶಿಕ್ಷಣ, ಮಾತೃ ಭಾಷಾ ಶಿಕ್ಷಣ ಪ್ರಾಮುಖ್ಯತೆ, ಆಂಗ್ಲ ಮಾಧ್ಯಮವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂಬಿತ್ಯಾದಿ ವಿಷಯ ಕುರಿತು ಪತ್ರದಲ್ಲಿ ತಿಳಿಸಿದ್ದರು.



ಪ್ರತಿಯಾಗಿ ಪ್ರತಿಕ್ರಿಯಿಸಿದ ಕಿರಣ್ ಮಜೂಂದಾರ್ ಶಾ, ಕಂಪನಿ ಜವಾಬ್ದಾರಿ ಅಡಿಯಲ್ಲಿ ನಾವು ಕೆಲ ಶಾಲೆಗಳನ್ನು ಉನ್ನತೀಕರಿಸಿದ್ದೇವೆ, ಆದರೆ 'ಮುಖ್ಯಮಂತ್ರಿ ಅವರ ಶಾಲಾ ಪ್ರಸ್ತಾವನೆಯನ್ನು ವಿರೋಧಿಸುತ್ತಿರುವ ಚಳವಳಿಗಾರರು' ಎಂಬ ವಿಷಯದ ಬಗ್ಗೆ ನಾನು ಮಾಡಿದ ಟ್ವೀಟ್ ಅನ್ನು ತಪ್ಪಾಗಿ ಅರ್ಥೈಸಲಾಗಿದೆ. ಮುಖ್ಯಮಂತ್ರಿಗಳನ್ನು ಭೇಟಿಯಾದವರ ಬಗ್ಗೆ ನನಗೆ ತಿಳಿದಿಲ್ಲ. ಕೇವಲ ವಿಷಯ ಕುರಿತು ಮಾತ್ರ ನಾನು ಸ್ಪಂದಿಸಿದ್ದೆ. ಕನ್ನಡ ಭಾಷೆ, ನೆಲ, ನಾಡು-ನುಡಿಯ ಬಗ್ಗೆ ಅಭಿಮಾನ, ಗೌರವ ಹೊಂದಿದವರಾಗಿದ್ದು, ಪರಂಪರೆ, ಸಾಹಿತ್ಯ, ನಾಟಕದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವುದಕ್ಕೆ ನಮಗೂ ಹೆಮ್ಮೆಯಿದೆ ಎಂದು ತಮ್ಮ ಟ್ವೀಟ್ ಹಿಂದಿನ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ.

# ಶಿವಾಜಿ ಪ್ರತಿಮೆ ಸ್ಥಾಪನೆ ಪ್ರಶ್ನಿಸಿದ್ದ ಪಿಐಎಲ್ ವಾಪಸ್

**ಬೆಂಗಳೂರು** ಬೆಳಗಾವಿ ಜಿಲ್ಲೆಯ ಬಸ್ತವಾಡ ಗ್ರಾಮದ ಬಸ್ ನಿಲ್ದಾಣದ ಮುಖ್ಯ ರಸ್ತೆಯಲ್ಲಿ ಶಿವಾಜಿ ಪ್ರತಿಮೆ ಸ್ಥಾಪನೆ ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಿಂಪಡೆಯಲಾಗಿದೆ.

ಸಾರ್ವಜನಿಕ ಸ್ಥಳದಲ್ಲಿ ಪ್ರತಿಮೆ ಸ್ಥಾಪಿಸಲು 'ಛತ್ರಪತಿ ಶಿವರಾಯ ಶಿವಸೃಷ್ಟಿ' ಯುವಕ ಮಂಡಳಿಗೆ ಅನುಮತಿ ನೀಡಿದ್ದ ಬಸ್ತವಾಡ ಗ್ರಾಮ ಪಂಚಾಯತಿ ಕ್ರಮ ಪ್ರಶ್ನಿಸಿ ಶಾಂತಪ್ಪ ಎಂ.ಪಾಟೀಲ್ ಹಾಗೂ ಗ್ರಾಮಸ್ಥರು ಸಲ್ಲಿಸಿದ್ದ ಪಿಐಎಲ್ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ ಹಾಗೂ ನ್ಯಾ. ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಪೀಠ ವಿಚಾರಣೆ ನಡೆಸಿತು.

**ಹೈಕೋರ್ಟ್ ಸುದ್ದಿಗಳು**

ಅರ್ಜಿದಾರರ ಪರ ವಕೀಲರು ವಾದಿಸಿ, ಬಸ್ತವಾಡ ಗ್ರಾಮದ ಬಸ್ ನಿಲ್ದಾಣದ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ಪ್ರತಿಮೆ ಸ್ಥಾಪಿಸುವುದರಿಂದ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತದೆ. ಈಗಾಗಲೇ ಪ್ರತಿಮೆ ಸ್ಥಾಪನೆಗೆ ಕಾಮಗಾರಿ ನಡೆಯುತ್ತಿದ್ದು, ತಡೆಗಟ್ಟುವಂತೆ ಹಾಗೂ ಆರಂಭಗೊಂಡಿರುವ ಕಾಮಗಾರಿಯನ್ನು ತೆರವುಗೊಳಿಸುವಂತೆ ಬೆಳಗಾವಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಸರಕಾರಿ ವಕೀಲ ಎಸ್.ಎಚ್ ಪ್ರಶಾಂತ್ ವಾದ ಮಂಡಿಸಿ, ಪ್ರತಿಮೆ ಸ್ಥಾಪನೆ ವಿಚಾರವಾಗಿ ಜಿಲ್ಲಾಧಿಕಾರಿಗಳು ಸಂಘದ ಜತೆ ಸಭೆ ನಡೆಸಿದ್ದಾರೆ. ಇದೇ ವಿಚಾರವಾಗಿ ಮತ್ತೊಮ್ಮೆ ಸಭೆ ನಡೆಯಲಿದೆ. ವಸ್ತುಸ್ಥಿತಿ ಗಮನಿಸಿಯೇ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೀಠಕ್ಕೆ ವಿವರಿಸಿದರು. ಜಿಲ್ಲಾಧಿಕಾರಿಗಳು ಸಭೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಅರ್ಜಿದಾರರ ಪರ ವಕೀಲರು, ಅರ್ಜಿ ಹಿಂಪಡೆಯಲು ಅನುಮತಿ ನೀಡುವಂತೆ ನ್ಯಾಯಾಲಯಕ್ಕೆ ಕೋರಿದರು. ಕೋರಿಕೆಯನ್ನು ಪೀಠ ಮಾನ್ಯ ಮಾಡಿದ್ದರಿಂದ ಪಿಐಎಲ್ ಹಿಂಪಡೆಯಲಾಯಿತು.

# ಅನಿಲ ಸೋರಿಕೆಯಿಂದ ದಂಪತಿ ಸಾವು !

**ಬೆಂಗಳೂರು:** ರಾಜರಾಜೇಶ್ವರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಂಪತಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಳಿಸಿರುವ ಪೊಲೀಸರು ಗೀಸರ್‌ನಿಂದ ಅನಿಲ ಸೋರಿಕೆ ಉಂಟಾಗಿ ದಂಪತಿ ಮೃತಪಟ್ಟಿದ್ದಾರೆ ಎಂದು ಶಂಕಿಸಿ ವಿವಿಧ ದೃಷ್ಟಿಕೋನಗಳಲ್ಲಿ ತನಿಖೆ ಕೈಗೊಂಡಿದ್ದಾರೆ.

ಸ್ನಾನದ ಕೊಠಡಿಯಲ್ಲಿ ವೆಂಟಿಲೇಟರ್ ಸರಿಯಾದ ರೀತಿ ಇಲ್ಲದ ಕಾರಣ ದಂಪತಿ ಮೃತಪಟ್ಟಿರುವುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು, ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸ್ನಾನದ ಕೋಣೆಯಲ್ಲಿ ಅಳವಡಿಸಲಾಗಿದ್ದ ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿದ್ದು, ಈ ಅನಿಲ ವೆಂಟಿಲೇಟರ್ ಮೂಲಕ ಹೊರಗೆ ಹೋಗಿದ್ದರೆ ಈ ಅನಾಹುತ ಸಂಭವಿಸುತ್ತಿರಲಿಲ್ಲ ಎಂಬ ಶಂಕೆ ವ್ಯಕ್ತಪಡಿಸಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಮಹೇಶ್ ಹಾಗೂ ಶೀಲಾ ದಂಪತಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ್ದು, ವರದಿ ಬಂದ ನಂತರವೇ ಸಾವು ಹೇಗೆ ಸಂಭವಿಸಿದೆ ಎಂಬುದು ನಿಖರವಾಗಿ ತಿಳಿದುಬರಲಿದೆ. ರಾಜರಾಜೇಶ್ವರಿ ನಗರ ವ್ಯಾಪ್ತಿಯ ಪಟ್ಟಣಗೆರೆಯ ಶಿವಗಂಗಾ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದ ಸಾಫ್ಟ್‌ವೇರ್ ಕಂಪನಿಯ ಉದ್ಯೋಗಿ ಮಹೇಶ್ ಹಾಗೂ ಪತ್ನಿ ಶೀಲ ಮಂಗಳವಾರ ಮಧ್ಯಾಹ್ನ ಸ್ನಾನದ ಕೊಠಡಿಯಲ್ಲಿ ಮೃತಪಟ್ಟಿದ್ದರು.

# ಶಂಕರಾಚಾರ್ಯ ಮಠದಲ್ಲಿ ಕಡತ ನಾಪತ್ತೆ: ನಾಲ್ವರ ಬಂಧನ

**ಬೆಂಗಳೂರು:** ಶಿವಗಂಗೆ ಬಳಿಯಿರುವ ಶ್ರೀ ಶಂಕರಾಚಾರ್ಯ ಮಠದಲ್ಲಿ ಕಡತಗಳು ನಾಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ನಾಲ್ವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ನರಸಿಂಹಯ್ಯ, ಆನಂದ್ .ಟಿ.ಆರ್, ಮಹೇಶ್ ಶರ್ಮಾ, ಕೃಷ್ಣಾ ಎಂಬುವವರನ್ನು ಬಂಧಿಸಲಾಗಿದ್ದು, ಮತ್ತೊಬ್ಬ ಆರೋಪಿ ಮೃತ್ಯುಂಜಯ ಪರಾರಿಯಾಗಿದ್ದಾನೆ.

ಇವರ ಮೇಲೆ ಮಠದ ಕೆಲವು ದಾಖಲೆ ಹಾಗೂ ಕಡತಗಳನ್ನು ಕದ್ದಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಮಠದ ಕೆಲವು ದಾಖಲೆ ಹಾಗೂ ಕಡತಗಳು ಜೂನ್‌ನಲ್ಲಿ ಕಾಣೆಯಾಗಿದ್ದವು. ಈ ಸಂಬಂಧ ಹೈಕೋರ್ಟ್ ವಕೀಲ ಶ್ರೀನಿವಾಸ್ ರಾವ್ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ನಂತರ ಈ ಪ್ರಕರಣ ಸಿಸಿಬಿಗೆ ವರ್ಗಾವಣೆಯಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ನಾಲ್ವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

# ಕೊಡಗು ರೈಲು ಯೋಜನೆ ಪ್ರಶ್ನಿಸಿ ಪಿಐಎಲ್

**ಬೆಂಗಳೂರು:** ಕೊಡಗು ಜಿಲ್ಲೆಯಲ್ಲಿ ಉದ್ದೇಶಿತ ಮೈಸೂರು-ಕುಶಾಲನಗರ-ಮಡಿಕೇರಿ ರೈಲು ಮಾರ್ಗ ನಿರ್ಮಾಣ ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ರೈಲು ಮಾರ್ಗ ನಿರ್ಮಾಣ ಯೋಜನೆ ಪ್ರಶ್ನಿಸಿ 'ಕೂರ್ಗ್ ವೈಲ್ಡ್ ಲೈಫ್' ಹೆಸರಿನ ಎನ್‌ಜಿಒ ಸಲ್ಲಿಸಿರುವ ಪಿಐಎಲ್ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿ, ಪ್ರಕರಣದ ಅಗತ್ಯ ಮಾಹಿತಿ ಪಡೆದುಕೊಂಡು ನ್ಯಾಯಾಲಯಕ್ಕೆ ಸಲ್ಲಿಸುವಂತೆ ವಕೀಲರಿಗೆ ಸೂಚಿಸಿ, ವಿಚಾರಣೆಯನ್ನು ಜು.25ಕ್ಕೆ ಮುಂದೂಡಿತು. ರೈಲ್ವೆ ಹಳಿಗಳನ್ನು ನಿರ್ಮಿಸುವುದರಿಂದ ಕೊಡಗು ಜಿಲ್ಲೆಯ ಸೂಕ್ಷ್ಮ ಜೀವ ವೈವಿಧ್ಯತೆ ಹೊಂದಿರುವ ಪ್ರದೇಶಗಳ ಮೇಲೆ ದುಷ್ಪರಿಣಾಮ ಬೀರಲಿದೆ ಎಂಬುದು ಅರ್ಜಿದಾರರ ಆರೋಪವಾಗಿದೆ.

ವಿಶ್ವವಾಣಿ
ಪತ್ರಿಕೆ ಬರುತ್ತಿಲ್ಲವೇ?
ಆತ್ಮೀಯ ಓದುಗರೇ, ವಿಶ್ವವಾಣಿ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆಯ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ
ಪ್ರಸರಣ ವಿಭಾಗ
9060402063
9110638698
circulation@vishwavani.news





ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮಕ್ಕೆ ಬ್ಯಾಟರಾಯನಪುರ ಕ್ಷೇತ್ರದ ಮಾರೇನಹಳ್ಳಿ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಆಗಮಿಸಿದ್ದರು. ಗ್ರಾಪಂ ಸದಸ್ಯರಾದ ಹೊಸಹಳ್ಳಿ ಮುನಿರಾಜು, ಕಾಂಗ್ರೆಸ್ ಮುಖಂಡರಾದ ಮರಳುಕುಂಟೆ ರಮೇಶ್, ದಾಸನಾಯಕನಹಳ್ಳಿ ಗೋಪಾಲ್, ಎಂ.ಪಿ.ವಿಶ್ವನಾಥ್ ಇತರರು ಇದ್ದರು.

# ಲೋಕಾಯುಕ್ತರಿಗೆ ಚಾಕು ಇರಿತ ಪ್ರಕರಣ: ಆರೋಪಿಗೆ ಮಂಪರು ಪರೀಕ್ಷೆ

**ಬೆಂಗಳೂರು:** ಲೋಕಾಯುಕ್ತ ನ್ಯಾಯಮೂರ್ತಿ ವಿಶ್ವನಾಥ್ ಶೆಟ್ಟಿ ಅವರಿಗೆ ಚಾಕು ಇರಿತ ಪ್ರಕರಣಕ್ಕೆ ಸಂಬಂಧಿಸಿ ಸಿಸಿಬಿ ಪೊಲೀಸರು ಆರೋಪಿ ತೇಜ್‌ರಾಜ್ ಶರ್ಮಾನನ್ನು ಗುರುವಾರ ಮಂಪರು ಪರೀಕ್ಷೆಗೆ ಒಳಪಡಿಸಲಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಸಿಸಿಬಿ ಪೊಲೀಸರು ಸಲ್ಲಿಸಿದ್ದ ಚಾರ್ಜ್‌ಶೀಟ್ ಕಂಡು ಕೆಂಡಾಮಂಡಲರಾಗಿದ್ದ ನ್ಯಾಯಮೂರ್ತಿ ವಿಶ್ವನಾಥ್‌ಶೆಟ್ಟಿ, ಆರೋಪಿ ಹೇಳಿದ್ದನ್ನು ಮಾತ್ರ ದಾಖಲಿಸಿದ್ದೀರಿ, ಆತನ ಹಿಂದಿರುವ ದುಷ್ಟಶಕ್ತಿ ಯಾರೆಂದು ಹುಡುಕಿ ಎಂದು ತಿಳಿಸಿದ್ದರು. ಉದ್ದೇಶಪೂರ್ವಕವಾಗಿ ಆರೋಪಿ ಮೂಲಕ ಹಲ್ಲೆ ನಡೆಸಿದ್ದಾರೆ. ಇದರ ಹಿಂದೆ ದುಷ್ಟ ಶಕ್ತಿಗಳ ಕೈವಾಡ ಇದೆ ಎಂಬ ವಿಶ್ವನಾಥ್ ಶೆಟ್ಟಿ ಅವರ ಸೂಚನೆ ಮೇರೆಗೆ ಸಿಸಿಬಿ ಪೊಲೀಸರು ಮರು ತನಿಖೆಗೆ ಇಳಿದಿದ್ದಾರೆ. ಸಿಸಿಬಿ ಪೊಲೀಸರು ಎಷ್ಟೇ ಪ್ರಯತ್ನಪಟ್ಟರೂ ಕೃತ್ಯದ ಹಿಂದೆ ಕೈವಾಡವಿರುವ ವ್ಯಕ್ತಿಯ ಬಗ್ಗೆ ಬಾಯ್ಬಿಡದ ತೇಜ್‌ರಾಜ್ ಶರ್ಮಾನನ್ನು ಮಂಪರು ಪರೀಕ್ಷೆಗೆ ಒಳಪಡಿಸಲು ಮುಂದಾಗಿದ್ದಾರೆ.

ಕೋರ್ಟ್ ಅನುಮತಿ ಪಡೆದು ಡಿಸಿಪಿ ಜೀನೇಂದ್ರ ಖಣಗಾವಿ ನೇತೃತ್ವದಲ್ಲಿ ಅಧಿಕಾರಿಗಳು ಅಹಮದಾಬಾದ್‌ಗೆ ತೆರಳಿದ್ದಾರೆ. ಗುರುವಾರ ಅಹಮದಾಬಾದ್‌ನಲ್ಲಿ ತೇಜ್‌ರಾಜ್ ಶರ್ಮಾಗೆ ಮಂಪರು ಪರೀಕ್ಷೆ ನಡೆಸಲಿದ್ದು, ಮಂಪರು ಪರೀಕ್ಷೆಯ ನಂತರ ಹಲ್ಲೆಯ ಹಿಂದಿರುವ ಆ ಶಕ್ತಿ ಯಾರು ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣ ತಿಳಿದು ಬರುವ ಸಾಧ್ಯತೆಯಿದೆ.

## ಸಭೆ ಸಮಾರಂಭ

**ಡಾ. ಕೆ.ಸುಬ್ರಾಯಶರ್ಮಾ ಅವರಿಂದ 'ದೈವೀ ಮಾಯಾ' ಕುರಿತು ಉಪನ್ಯಾಸ**
**ಆಯೋಜನೆ:** ಪರಮಾರ್ಥ ವಿಚಾರ ಸಂಘ ಟ್ರಸ್ಟ್
**ಸ್ಥಳ:** ಅಧ್ಯಾತ್ಮ ಮಂದಿರ, ನ್ಯಾಷನಲ್ ಹೈಸ್ಕೂಲ್ ರಸ್ತೆ, ವಿಶ್ವೇಶ್ವರಪುರ
**ಸಮಯ:** ಬೆಳಗ್ಗೆ 7.45

**ಹರಿದಾಸ ಸಾಹಿತ್ಯ ಸಂಗೀತ ಉತ್ಸವ**
**ಆಯೋಜನೆ:** ಕರ್ನಾಟಕ ಹರಿದಾಸ ಸೈಂಟಿಫಿಕ್ ರಿಸರ್ಚ್ ಸೆಂಟರ್
**ಸ್ಥಳ:** ವಿಜಯರಂಗ, 17ನೇ ಅಡ್ಡರಸ್ತೆ, ವಿಜಯನಗರ
**ಸಮಯ:** ಬೆಳಗ್ಗೆ 9

**ಸಮಂಜಸ ಉದ್ಘಾಟನಾ ಸಮಾರಂಭ ಹಾಗೂ ವಿಚಾರ ಮಂಥನ**
**ಉದ್ಘಾಟನೆ:** ಉಪ ಮುಖ್ಯಮಂತ್ರಿ, ಡಾ. ಜಿ.ಪರಮೇಶ್ವರ
**ಅಧ್ಯಕ್ಷತೆ:** ವೈದ್ಯಕೀಯ ಶಿಕ್ಷಣ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್



**ಮುಖ್ಯ ಅತಿಥಿಗಳು:** ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್, ಎಐಸಿಸಿ ಪ್ರದಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್
**ಆಯೋಜನೆ:** ಸಮಂಜಸ
**ಸ್ಥಳ:** ಪುರಭವನ
**ಸಮಯ:** ಬೆಳಗ್ಗೆ 9.30

**14ನೇ ಇಂಡಿಯಾ ಇನೋವೇಶನ್ ಸಭೆ**
**ಉದ್ಘಾಟನೆ:** ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಸುರೇಶ್ ಪ್ರಭು
**ಮುಖ್ಯ ಅತಿಥಿ:** ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ
**ಸ್ಥಳ:** ಲಲಿತ್ ಅಶೋಕ್ ಹೋಟೆಲ್
**ಸಮಯ:** ಬೆಳಗ್ಗೆ 9.30

**'ಪ್ಲಾಸ್ಟಿಕ್ ಅಪಾಯಗಳು' ಕುರಿತ ವ್ಯಂಗ್ಯಚಿತ್ರ ಪ್ರದರ್ಶನ**
**ಸ್ಥಳ:** ಭಾರತೀಯ ಕಾರ್ಟೂನ್ ಗ್ಯಾಲರಿ, ಎಂ.ಜಿ.ರೋಡ್, ಟ್ರಿನಿಟಿ ಸರ್ಕಲ್
**ಸಮಯ:** ಬೆಳಗ್ಗೆ 10

**ಭವಿಷ್ಯದ ಕೌಶಲ**
**ಮುಖ್ಯ ಅತಿಥಿಗಳು:** ಕೌಶಲಾಭಿವೃದ್ಧಿ ಸಚಿವ ಆರ್.ವಿ.ದೇಶಪಾಂಡೆ, ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆಯ ಡೀನ್ ಕಮ್ರಾನ್ ರಿಜ್ವಿ
**ಆಯೋಜನೆ:** ಎಫ್‌ಕೆಸಿಸಿಐ
**ಸ್ಥಳ:** ತಾಜ್ ವೆಸ್ಟ್ ಎಂಡ್ ಹೋಟೆಲ್
**ಸಮಯ:** ಬೆಳಗ್ಗೆ 10

**ಡಾ. ಗುರುರಾಜ ಕರ್ಜಗಿ ಅವರಿಂದ 'ಬೆಳಕಿನ ದೀಪಗಳು' ಕುರಿತು ಉಪನ್ಯಾಸ**
**ಆಯೋಜನೆ:** ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
**ಸ್ಥಳ:** ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ ರಸ್ತೆ, ನರಸಿಂಹರಾಜ ಕಾಲೊನಿ
**ಸಮಯ:** ಸಂಜೆ 6.30

**ಓದುಗರ ಗಮನಕ್ಕೆ:** ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಕೃತಿ ಬಿಡುಗಡೆ, ಕಲಾ ಪ್ರದರ್ಶನ ಮತ್ತು ಇತರೆ ಸಮಾಜಮುಖಿ ಕಾರ್ಯಕ್ರಮಗಳ ಮಾಹಿತಿ ಮತ್ತು ವಿವರವನ್ನು ಮುಂಚಿತವಾಗಿ ಪತ್ರಿಕೆಗೆ ಕಳುಹಿಸಿ ಕೊಡಬಹುದು. ನಿಮ್ಮ ಕಾರ್ಯಕ್ರಮ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. **ನಮ್ಮ ವಿಳಾಸ:** ವಿಶ್ವವಾಣಿ ದಿನಪತ್ರಿಕೆ, ಎರಡನೇ ಮತ್ತು ಮೂರನೇ ಮಹಡಿ, ಧನುಷ್ ಪ್ಲಾಜಾ, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು- 560098, **ಇ-ಮೇಲ್ ವಿಳಾಸ:** vishvavaninews@gmail.com ಇಲ್ಲಿಗೆ ಕಳುಹಿಸಬಹುದು.